ದಿನಾಂಕ: 03.10.2020

# ವಾರ್ಡ್ ಸಮಿತಿ ಸಭಾ ನಡವಳಿಗಳು, ವಾರ್ಡ್ ನಂ–54 ಹೂಡಿ

ಮಾನ್ಯ ಆಯುಕ್ತರು ಬಿಬಿಎಂಪಿ ರವರ ಆದೇಶದಂತೆ ವಾರ್ಡ್ ಸಂಖ್ಯೆ: 54 ಹೂಡಿ ವಾರ್ಡ್ ಸಮಿತಿ ಸಭೆಯನ್ನು ನೋಡಲ್ ಅಧಿಕಾರಿಗಳು ರವರ ಅಧ್ಯಕ್ಷತೆಯಲ್ಲಿ ದಿನಾಂಕ: 03.10.2020 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ಸಮಿತಿ ಅಭೆಯನ್ನು 54– ವಾರ್ಡಿನ ಕಾಮಗಾರಿ ಇಲಾಖೆಯ ವಾರ್ಡ್ ಕಛೇರಿಯಲ್ಲಿ ಆರ್.ಡಬ್ಲ್ಯೂ.ಎ. ಹಾಗೂ ಸಾರ್ವಜನಿಕರೊಂದಿಗೆ ಕುಂದು ಕೊರತೆಗಳನ್ನು ಚರ್ಚಿಸಲು ನೊಡಲ್ ಅಧಿಕಾರಿಗಳು ಸೂಚಿಸಿರುತ್ತಾರೆ.

**ಹಾಜರಿದ್ದ ಅಧಿಕಾರಿ ನೌಕರರು ಮತ್ತು ಆರ್.ಡಬ್ಲ್ಯೂ.ಎ.**

1. ಡಾ// ಕಲ್ಪನಾ . ನೋಡಲ್ ಅಧಿಕಾರಿ.
2. ರಂಗನಾಥ್.ಆರ್. AEE Hoodi
3. ಶೇಖ್ ಮೊಹಿಯುದ್ದಿನ್ AE Hoodi
4. ಮುನಿನಾಯಕ್ AE Bescom
5. ನಾಗರಾಜ.ವಿ SHI Hoodi
6. ಸುದೀಪ್. RI Hoodi
7. ವೀರಪ್ಪ. JHI Hoodi
8. ಸುರೇಶ್ ಬಾಬು. Marshal
9. ಸುದರ್ಶನ್. Contract Sup
10. ಆರೋಗ್ಯ ಸ್ವಾಮಿ. RWA

**ನೊಡಲ್ ಅಧಿಕಾರಿಗಳು ಹಾಜರಿರುವ ಅಧಿಕಾರಿ ನೌಕರರನ್ನು ಸ್ವಾಗತಿಸಿ.**

ವಿಷಯ: ಮೊದಲಿಗೆ ಘನತ್ಯಾಜ್ಯ ನಿರ್ವಹಣೆಯ ಬಗ್ಗೆ ಚರ್ಚಿಸಲು ತಿಳಿಸಿರುತ್ತಾರೆ.
ಅದರಂತೆ ವಾರ್ಡ್ ವ್ಯಾಪ್ತಿಯಲ್ಲಿ ಸದ್ಯ 36 ಆಟೋ 05 ಕಾಂಪ್ಯಾಂಕ್ಟರ್‌ಗಳಿರುತ್ತವೆ ಮತ್ತು ಪೌರಕಾರ್ಮಿಕರ ಸಂಖ್ಯೆನ್ನು ತಿಳಿಸಲಾಗಿ, ವಾರ್ಡ್‌ನ ಕೇಂದ್ರ ಕಛೇರಿಯ ನಿರ್ದೇಶನದಂತೆ 167 ಪೌರಕಾರ್ಮಿಕರು ಇದ್ದು ಇದರಲ್ಲಿ ಸದ್ಯ 141 ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದು ನಮಗೆ 26 ಜನ ಪೌರಕಾರ್ಮಿಕರು ಕಡಿಮೆ ಇದ್ದು. ಇದರ ಬದಲಿಗೆ ಕಡಿಮೆ ಇರುವ PK ಗಳಿಗೆ ಬದಲಿ ವ್ಯವಸ್ಥೆ ಮಾಡಿಕೊಳ್ಳಲು ಕಡತವನ್ನು ತಯಾರಿಸಿ ಕಮಿಟಿ ವತಿಯಿಂದ ಜಂಟಿ ಆಯುಕ್ತರು ಹಾಗೂ ಮಾನ್ಯ ಆಯುಕ್ತರಿಗೆ ಕಡತವನ್ನು ತಯಾರಿಸಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.
ವಾರ್ಡ್ ವ್ಯಾಪ್ತಿಯಲ್ಲಿನ ಬ್ಲಾಕ್ ಸ್ಪಾಟ್‌ಗಳ ಬಗ್ಗೆ ವಿವರಿಸುವಂತೆ ಆರೋಗ್ಯ ನಿರೀಕ್ಷಕರಿಗೆ ಸೂಚಿಸಿರುತ್ತಾರೆ.

ಅದರಂತೆ ವಾರ್ಡ್ ವ್ಯಾಪ್ತಿಯಲ್ಲಿ ಬ್ಯೂಟಿಫಿಕೇಷನ್ ಮಾಡಲು ಸೂಕ್ತ ಹಣದ ಕೊರತೆಯಿದ್ದು ಹಣವನ್ನು ನೀಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿರುತ್ತಾರೆ.

ಹಾಜರಿದ್ದ ಆರೋಗ್ಯಸ್ವಾಮಿ ಆರ್.ಡಬ್ಲ್ಯೂ.ಎ. ರವರು ಕಸದ ಸಮಸ್ಯೆಯ ಬಗ್ಗೆ ತಿಳಿಸಿರುತ್ತಾರೆ. ಕಸವನ್ನು ಮನೆ ಮನೆಯಿಂದ ಸಂಗ್ರಹಿಸುತ್ತಿರುತ್ತಾರೆ ಹಾಗೂ ರಸ್ತೆ ಗುಡಿಸುವವವರು ರಸ್ತೆಯನ್ನು ಗುಡಿಸಿದ ನಂತರ ರಸ್ತೆಯ ಪಕ್ಕದಲ್ಲಿ ಒಂದು ಕಡೆ ತಂದು ಸುರಿಯುತ್ತಾರೆಂದು ತಿಳಿಸಿರುತ್ತಾರೆ.

ನೋಡಲ್ ಅಧಿಕಾರಿಗಳು ಪ್ರತಿ ವಾರಕ್ಕೊಮ್ಮೆ ಬಂದು ಬ್ಲಾಕ್ ಸ್ಪಾಟ್ ಬ್ಯೂಟಿಫಿಕೇಶನ್ ಮಾಡಲು ಸೂಚಿಸಿರುತ್ತಾರೆ.

ಆರೋಗ್ಯ ನಿರೀಕ್ಷಕರು ಬ್ಲಾಕ್ ಸ್ಪಾಟ್‌ಗಳ ವಿವರವನ್ನು ತಿಳಿಸಿರುತ್ತಾರೆ ಹಾಗೂ ಹೂಡಿ ಸಿಟಿ ಸೂಪರ್ ಬಜಾರ್ ಮುಂದೆ ಬೀಳುವ ಬ್ಲಾಕ್‌ಸ್ಪಾಟ್, ಬ್ಯೂಟಿಫಿಕೇಶನ್ ಮಾಡಲು ಸೂಚಿಸಿರುತ್ತಾರೆ ಮತ್ತು ಹೂಡಿ ಮುಖ್ಯ ರಸ್ತೆಯಲ್ಲಿರುವ ಪಾದಾಚಾರಿ ರಸ್ತೆಯಲ್ಲಿರುವ ಅಂಗಡಿಗಳಿಗೆ ಕಸ ವಿಂಗಡಿಸದಿದ್ದಲ್ಲಿ ಅಥವಾ ಪ್ಲಾಸ್ಟಿಕ್ ಬಳಕೆ ಮಾಡಿದ್ದಲ್ಲಿ ದಂಡ ವಿಧಿಸಲು ಸೂಚಿಸಿರುತ್ತಾರೆ.

ಅಯ್ಯಪ್ಪನಗರ ಮುಖ್ಯರಸ್ತೆಯ ಕೃಷ್ಣ ಕಮಿನೀಟಿ ಹಾಲ್ ಸೆಂಟರ್ ಬಳಿಯಿರುವ ಬ್ಲಾಕ್ ಸ್ಪಾಟ್, ಬ್ಯೂಟಿಫಿಕೇಶನ್ ಮಾಡಲು ತಿಳಿಸಿರುತ್ತಾರೆ ರಸ್ತೆ ಬದಿಯಲ್ಲಿರುವ ಅಂಗಡಿಗಳನ್ನು ತೆಗೆದು ಬ್ಯೂಟಿಫಿಕೇಷನ್ ಮಾಡಲು ಸೂಚಿಸಿರುತ್ತಾರೆ.

ನೋಡಲ್ ಅಧಿಕಾರಿಗಳು ಹಸಿತ್ಯಾಜ್ಯವನ್ನು ಹೆಚ್ಚು ಹೆಚ್ಚು ಮಾಡುವ ಬಗ್ಗೆ ಚರ್ಚಿಸಿರುತ್ತಾರೆ.

ಸಭೆಯಲ್ಲಿದ್ದ ಆರೋಗ್ಯಸ್ವಾಮಿ ರವರು ನೋಡಲ್ ಅಧಿಕಾರಿಗಳ ಮಾತಿಗೆ ನಮ್ಮ ಮನೆಯಲ್ಲಿ ಹಸಿತ್ಯಾಜ್ಯ ಸಂಗ್ರಹಿಸುತ್ತಿರುವುದು ತುಂಬಾ ಒಳ್ಳೆಯದು ಹಾಗೂ ನಾವು ಸಹ ಹಸಿಕಸ, ಒಣಕಸ ಮಾಡಿಸುತ್ತಿರುತ್ತೇವೆಂದು ತಿಳಿಸಿರುತ್ತಾರೆ.

ನೋಡಲ್ ಅಧಿಕಾರಿಗಳು ಭೈರತಿ ವ್ಯಾಪ್ತಿಯಲ್ಲಿ ಹಸಿಕಸ ಸಂಗ್ರಹಣೆಗೆ ಸಂಬಂಧಿಸಿದಂತೆ ಆರ್.ಡಬ್ಲ್ಯೂ.ಎಂ. ಮತ್ತು ಸಾರ್ವಜನಿಕರಿಗೆ ಅರಿವು ಮೂಡಿಸುವ ಒಂದು ಕಾರ್ಯಕ್ರಮವನ್ನು ಮಾಡಲು ಅಧಿಕಾರಿಗಳಿಗೆ ವಿವರಿಸಲು ಸೂಚಿಸಿರುತ್ತಾರೆ.

ನೋಡಲ್ ಅಧಿಕಾರಿಗಳ ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಸೂಚಿಸಿರುತ್ತಾರೆ.

ಅದರಂತೆ ಸುದೀಪ್ ಆರ್.ಐ. ರವರು ಪ್ರಸ್ತುತ Covid-19 Contact Tracing ಮತ್ತು Testing ಮಾಡುವ ಬಗ್ಗೆ ವಿವರಿಸಿರುತ್ತಾರೆ.

ನೋಡಲ್ ಅಧಿಕಾರಿಗಳು ತ್ಯಾಜ್ಯವಿಂಗಡಣೆಯ ಬಗ್ಗೆ ಹಸಿ ತ್ಯಾಜ್ಯವನ್ನು ಸಂಗ್ರಹಿಸಲು ಪ್ರತಿ ಬ್ಲಾಕ್‌ವಾರು ಆಟೋಗಳಿಗೆ ಮೈಕ್ ಮೂಲಕ ತ್ಯಾಜ್ಯ ವಿಂಗಡಣೆಯ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಮಾರ್ಷಲ್, ಗುತ್ತಿಗೆದಾರರು, ಎಸ್.ಡಬ್ಲ್ಯೂ.ಎಂ. ಸೂಪರ್‌ವೈಸರ್ ಹಾಗೂ ಜೂನಿಯರ್ ಹೆಲ್ತ್‌ಇನ್ಸ್‌ಪೆಕ್ಟರ್ ರವರಿಗೆ ಸೂಚಿಸಿರುತ್ತಾರೆ.

ವಾರ್ಡ್‌ನಲ್ಲಿ ಕಾರ್ಯನಿರ್ವಹಿಸುವ ಪೌರಕಾರ್ಮಿಕರ ಹೆಸರುಗಳ ತಪ್ಪಾಗಿ ನಮೂದಾಗಿದ್ದು ಅದನ್ನು ಸರಿಪಡಿಸಲು ಮೇಲಾಧಿಕಾರಿಗಳಿಗೆ ಸೂಚಿಸಲು ತಿಳಿಸಿರುತ್ತಾರೆ.

ನೋಡಲ್ ಅಧಿಕಾರಿಗಳು ಮಾರ್ಷಲ್ ರವರಿಗೆ ತ್ಯಾಜ್ಯ ವಿಂಗಡಿಸದಿದ್ದವರಿಗೆ ದಂಡ ವಿಧಿಸಲು ಸೂಚಿಸಿಲಾಗಿದೆ. ಮತ್ತು ಕೇಂದ್ರ ಕಛೇರಿಯ ಸಂತೋಷ್, ಎಇಇ-2 (ಎಸ್.ಡಬ್ಲ್ಯೂ.ಎಂ) ರವರಿಗೆ ಪೌರಕಾರ್ಮಿಕರ ಹೆಸರುಗಳನ್ನು ಸರಿಪಡಿಸಲು ಪೋನ್ ಮೂಲಕ ಕರೆ ಮಾಡಿ ತಿಳಿಸಿರುತ್ತಾರೆ.

ನೋಡಲ್ ಅಧಿಕಾರಿಗಳು ಬೆಸ್ಕಾಂ ಇಲಾಖೆಗೆ ಸಂಬಂಧಿಸಿದಂತೆ ಚರ್ಚಿಸಲು ಸೂಚಿಸಿರುತ್ತಾರೆ.

ಅದರಂತೆ ಮುನಿನಾಯಕ್ ಎಇ. ಬೆಸ್ಕಾಂ ರವರು ಬೆಸ್ಕಾಂ ಗೆ ಸಂಬಂಧಿಸಿದಂತೆ ವಾರ್ಡ್‌ನಲ್ಲಿ ನಡೆಯುವ ಕೆಲಸ ಕಾರ್ಯಗಳ ಬಗ್ಗೆ ತಿಳಿಸಿರುತ್ತಾರೆ ಹಾಗೂ ಹೊಸ ಬೋರ್‌ವೆಲ್‌ಗಳ ಕೊರಿಸಿದ ನಂತರ ಗುತ್ತಿಗೆದಾರಿಗೆ ತಿಳಿಸಿ ಬೆಸ್ಕಾಂ ಕನೆಕ್ಷನ್ ಪಡೆದು ನಂತರ ಉಪಯೋಗಿಸಲು ಸೂಚಿಸಿರುತ್ತಾರೆ.

ಬಿಬಿಎಂಪಿ ಹಾಗೂ ಬೆಸ್ಕಾಂ ಸೇರಿ ಜೊತೆಯಾಗಿ ಜಂಟಿ ಇನ್ಸ್‌ಪೆಕ್ಷನ್ ಮಾಡಿ ರೆಗ್ಯೊಲೈಸ್ ಮಾಡಲು ಸೂಚಿಸಲಾಯಿತು.

ನೋಡಲ್ ಅಧಿಕಾರಿಗಳು ಕಾಮಗಾರಿ ಇಲಾಖೆಗೆ ಸಂಬಂಧಿಸಿದಂತೆ ಚರ್ಚಿಸಲು ಸೂಚಿಸಲಾಗಿ, ವಾರ್ಡ್ ಇಂಜಿನೀಯರ್ ರವರು ಮುಂದಿನ ವಾರ ಪಾದಾಚಾರಿ ಒತ್ತುವರಿ ಹಾಗೂ ಅನಧಿಕೃತ Hanging

ಕೇಬಲ್‌ಗಳನ್ನು ತೆರುವುಗೊಳಿಸುತ್ತೇವೆಂದು ತಿಳಿಸಿರುತ್ತಾರೆ ಹಾಗೂ ರಸ್ತೆಗುಂಡಿಗಳ ಬಗ್ಗೆ ತಿಳಿಸಲಾಗಿ ವಾರ್ಡ್ ವ್ಯಾಪ್ತಿಯಲ್ಲಿನ ರಸ್ತೆಗುಂಡಿ ಗಳ ಬಗ್ಗೆ ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆ.

ರೋಡ್ ವರ್ಕ್‌ಗೆ ಭೈರತಿಗೆ ಸಂಬಂಧಿಸಿದಂತೆ ಚರಂಡಿಗೆ ಸಂಬಂಧಿಸಿದ ಆರೋಗ್ಯಸ್ವಾಮಿರವರು ದೂರು ನೀಡಿದ್ದು ಅದರ ಬಗ್ಗೆ ಕ್ರಮ ಕೈಗೊಳ್ಳಲು ಸಹಾಯಕ ಅಭಿಯಂತರರಿಗೆ ತಿಳಿಸಲಾಯಿತ್ತು.

ಆರೋಗ್ಯ ಇಲಾಖೆಗೆ ಸಂಬಂಧಿಸಿದಂತೆ ಕಂಟೈನ್‌ಮೆಂಟ್ ವಲಯಗಳಲ್ಲಿ ಎಲ್ಲಾ ಇಲಾಖೆಗಳಿಂದ Primary and Secondary contacts ಗಳನ್ನು ಕಡ್ಡಾಯವಾಗಿ ಸ್ವಾಬ್‌ಟೆಸ್ಟ್ ಮಾಡಲು ಸೂಚಿಸಲಾಯಿತ್ತು.

ಅದರಂತೆ ಆರೋಗ್ಯ ಇಲಾಖೆಗೆ ಸಂಬಂದಿಸಿದಂತೆ ಚರ್ಚಿಸಲು ಸೂಚಿಸಲಾಗಿ ಈವರೆಗೆ ವಾರ್ಡ್ ವ್ಯಾಪ್ತಿಯಲ್ಲಿ 1800 ಕೋವಿಡ್-19 ಕೇಸ್‌ಗಳು ದಾಖಲಾಗಿದ್ದು ವಾರ್ಡ್‌ನಲ್ಲಿ ಪ್ರೈಮರಿ ಮತ್ತು ಸೆಕೆಂಡರಿ ಕಾನ್‌ಟ್ಯಾಕ್ಟ್ ಗುರುತಿಸುವಿಕೆ, ಟೆಸ್ಟಿಂಗ್‌ಗಳ ಸಂಖ್ಯೆಯನ್ನು ಹೆಚ್ಚು ಹೆಚ್ಚು ಮಾಡಬೇಕೆಂದು ತಿಳಿಸಿರುತ್ತಾರೆ ಮತ್ತು ಟೆಸ್ಟಿಂಗ್‌ಗಳ ವಿಚಾರವಾಗಿ ಮಾದ್ಯಮಗಳಲ್ಲಿ ಟೆಸ್ಟ್ ಮಾಡದೆ ರಿಸಲ್ಟ್‌ಗಳನ್ನು ನೀಡಲಾಗುತ್ತಿದೆ ಎಂದು ತೋರಿಸುತ್ತಿದ್ದು ಅದುದರಿಂದ ಟೆಸ್ಟಿಂಗ್‌ಗಳನ್ನು ಸರಿಯಾಗಿ ಮಾಡಬೇಕೆಂದು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಿರುತ್ತಾರೆ.

ನಂತರ ವಾರ್ಡ್ ಸಮಿತಿ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತ್ತು.

ವಾರ್ಡ್ ಸಮಿತಿ ನೋಡಲ್ ಅಧಿಕಾರಿ
ಡಾ//ಕಲ್ಪನಾ. ಹೂಡಿ-54
ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ
ಮಹದೇವಪುರ ವಲಯ

ವಾರ್ಡ್ ಸಮಿತಿ ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ-54 ಹೂಡಿ
ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ
ಮಹದೇವಪುರ ವಲಯ